

ಕೇಕೃವಿಯ ಕಸಿಗಾರ್ತಿ ಸಿಬ್ಬಂದಿ ತೋರಿಸುತ್ತಿರುವ ಕಸಿ ಚೆನ್ನಾಗಿ ಜೋಡಿಸಿದ ನಂತರ ಕ್ಲಿಪ್ ಬಿಡಿಸಿದ ಕಸಿ ಟೊಮೆಟೊ ಗಿಡ.

# ಕಸಿಯಿಂದ ಟೊಮೆಟೊ ಬೆಳೆ ಸಮೃದ್ಧಿ

**ಟೊಮೆಟೊ ಬೆಳೆಗೂ ಕರ್ನಾಟಕದ ಕರಾವಳಿ ಜಿಲ್ಲೆಗಳಿಗೂ ಎಣ್ಣೆಸೀಗೆಯ ಸಂಬಂಧ. ಬಾಡು ರೋಗದಿಂದಾಗಿ ಕರಾವಳಿ ಮಣ್ಣಿನಲ್ಲಿ ಟೊಮೆಟೊ ಕೈಹತ್ತದು. ಈ ಸಮಸ್ಯೆಗೆ ಕೃಷಿ ವಿಜ್ಞಾನಿಗಳು ಕಸಿಯ ಮೂಲಕ ಪರಿಹಾರ ಕಂಡುಕೊಂಡಿದ್ದಾರೆ. ಈ ಕಸಿ ಗಿಡಗಳು ಟೊಮೆಟೊ ಕ್ರಾಂತಿಗೆ ಮುನ್ನುಡಿ ಬರೆಯುವ ನಿರೀಕ್ಷೆಯಿದೆ. ಚಳಿ ಪ್ರದೇಶಕ್ಕಷ್ಟೇ ಸೀಮಿತವಾಗಿದ್ದ ಹೂಕೋಸು, ಎಲೆಕೋಸು ಕೃಷಿಯನ್ನು ವ್ಯಾಪಕಗೊಳಿಸುವ ಪ್ರಯತ್ನಗಳೂ ನಡೆದಿವೆ.**

■ ಶ್ರೀ ಪಡ್ರೆ

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಿಗೆ ಬನ್ನಿ. ಹಳ್ಳಿಮೂಲೆಯ ಯಾವುದೇ ಅಂಗಡಿಗೊಮ್ಮೆ ಇಣುಕಿನೋಡಿ. ಅಲ್ಲಿ ವರ್ಷಪೂರ್ತಿ ಟೊಮೆಟೊ ಇದ್ದೇ ಇರುತ್ತದೆ. ಇಲ್ಲಿನ ಜನರ ಅಚ್ಚುಮೆಚ್ಚಿನ ತರಕಾರಿ ಅದು! ಆದರೆ ವಿಪರ್ಯಾಸ ಗೊತ್ತೇ? ಎಂಥಾ ಜಾಣ ಕೃಷಿಕರಿಗೂ ಈ ಬೆಳೆಯನ್ನಿಲ್ಲಿ ಬೆಳೆಸಲು ಆಗುವುದಿಲ್ಲ. ಕಾರಣ, ಅದನ್ನು ಬಾಧಿಸುವ ಬಾಡು ರೋಗ. ಇಂಗ್ಲಿಷಿನಲ್ಲಿ ಬ್ಯಾಕ್ಟೀರಿಯಲ್ ವಿಲ್ಟ್.

ಈ ರೋಗ ಹೆಚ್ಚು ಮಳೆಯ ಮಲೆನಾಡಿನಲ್ಲಷ್ಟೇ ಕಾಣಿಸುತ್ತದೆ. ಬಯಲುಸೀಮೆಯ ಕ್ಷಾರ ಮಣ್ಣಿನಲ್ಲಿ ಅದು ಇಲ್ಲ. ಈ ಮಣ್ಣುಜನ್ಯ ರೋಗಕಾರಿ ಬ್ಯಾಕ್ಟೀರಿಯಾದ ಬೆಳವಣಿಗೆಗೆ ಮಲೆನಾಡಿನ ಹುಳಿಮಣ್ಣು ಹೇಳಿ ಮಾಡಿಸಿದ್ದು. ಯಾವುದೇ ಟೊಮೆಟೊ ಗಿಡ ಇಲ್ಲಿ ಮೊಳಕೆ ಬಂದು ಹುಲುಸಾಗಿ ಬೆಳೆಯುತ್ತದೆ. ಇನ್ನೇನು ಹೂ ಬಿಟ್ಟು ಒಂದೆರಡು ಕಾಯಿ ಮಿಡಿ ಆಯಿತು ಎನ್ನುವಾಗ ಬಾಡು ಅಥವಾ ಸೊರಗು ರೋಗ ಕಾಣಿಸಿಕೊಳ್ಳುತ್ತದೆ. ಒಂದೆರಡು ದಿನ ಸಾಕು, ಗಿಡ ಪೂರ್ತಿ ಬಾಡಿ ಸತ್ತೇಬಿಡುತ್ತದೆ. ಅಪವಾದಕ್ಕೆ, ಅಲ್ಲೋ ಇಲ್ಲೋ ಕೆಲವು ಗಿಡ ಬೆಳೆದು ಫಸಲು ಕೊಡುವುದಿಲ್ಲ ಎಂದಲ್ಲ. ಆದರೆ ಹೆಚ್ಚಿನ ಸಂದರ್ಭಗಳಲ್ಲೂ ಬಾಡು ರೋಗ ಕಟ್ಟಿಟ್ಟದ್ದು.

ಕರ್ನಾಟಕದ ಮಲೆನಾಡು ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಹೆಚ್ಚು ಮಳೆಯ ಭಾಗಗಳಲ್ಲಿ ಟೊಮೆಟೊದ ವಾಣಿಜ್ಯ

